
# ಹೊಸತು





## ಬಾಯ ಫ್ಲವರ್ ಜಾರ್

ಒಳಾಂಗಣ ವಿನ್ಯಾಸದ ಉತ್ಪನ್ನಗಳಿಗೆ ಹೆಸರಾದ ಬಾಯ ಕಂಪೆನಿ ಇದೀಗ ಹೊಸದಾಗಿ ವಿವಿಧ ಹೊಸ ವಿನ್ಯಾಸಗಳ ಪಾಟರಿಯನ್ನು ಮಾರುಕಟ್ಟೆಗೆ ತಂದಿದೆ. ಹೊಸ ಮಾದರಿಯ ವಾಸ್ ಮತ್ತು ಫ್ಲವರ್ ಜಾರ್‌ಗಳು ಒಳಾಂಗಣ ವಿನ್ಯಾಸಕ್ಕೆ ಹೊಸ ಮೆರುಗು ನೀಡುತ್ತದೆ. ಇದನ್ನು ಪರಿಣತ ಕಲಾವಿದರು ಕ್ಲೇ ಯಲ್ಲಿ ಮಾಡಿದ್ದು, ದೀರ್ಘ ಕಾಲ ಬಾಳಿಕೆ ಬರುತ್ತದೆ ಎನ್ನುತ್ತದೆ ಕಂಪೆನಿ. ವಿವಿಧ ಆಕಾರ ಮತ್ತು ವಿನ್ಯಾಸಗಳಲ್ಲಿ ಲಭ್ಯ. ಬೆಲೆ ₹ 3,225ರಿಂದ ₹ 9,625.

ವಿವರಕ್ಕೆ: www.baayadesign.com




## ಲುಮಿಕ್ಸ್ ಸೂಪರ್ ಜೂಮ್ ಕ್ಯಾಮೆರಾ

ಪ್ಯಾನಸೋನಿಕ್, ಲುಮಿಕ್ಸ್ ಡಿಎಂಸಿ–ಎಫ್‌ಝಡ್200 ಹೆಸರಿನ ಸೂಪರ್ ಜೂಮ್ ಡಿಜಿಟಲ್ ಕ್ಯಾಮರಾ ಬಿಡುಗಡೆ ಮಾಡಿದೆ.

ಇತ್ತೀಚಿನ ಮಾದರಿಗಳಲ್ಲಿ ಹಲವು ಸುಧಾರಣೆಗಳನ್ನು ಹೊಂದಿರುವ ಎಫ್‌ಝಡ್200 ಇದೀಗ ಎಫ್2.8 ಮ್ಯಾಕ್ಸಿಮಮ್ ಅಪರ್ಚರ್‌ನ ಲೆನ್ಸ್‌ನೊಂದಿಗೆ ಬಂದಿದೆ. ಎಫ್‌ಝಡ್ 200 ಲೆನ್ಸ್ ಅತ್ಯಂತ ಮಹತ್ತರ ಸುಧಾರಣೆಯಾಗಿದ್ದು ಹೆಚ್ಚುವರಿ ಹೊಳಪನ್ನು ನೀಡುವ ಮೂಲಕ ಉದ್ದದ ಫೋಕಲ್ ಲೆನ್ಸ್ ಅಥವಾ ಮಂದ ಬೆಳಕಿನಲ್ಲಿಯೂ ವಿಭಿನ್ನತೆ ನೀಡುತ್ತದೆ.

12.1 ಮೆಗಾಪಿಕ್ಸೆಲ್ ಹೈ ಸೆನ್ಸಿಟಿವಿಟಿ ಎಂಒಎಸ್ ಸೆನ್ಸರ್ ಮತ್ತು ಅತ್ಯಾಧುನಿಕ ಸದ್ದು ನಿಯಂತ್ರಣ ವ್ಯವಸ್ಥೆಯಿಂದಾಗಿ ಇದರಿಂದ ಅತ್ಯುತ್ತಮ ಸ್ಪಷ್ಟ ಚಿತ್ರ ದೊರೆಯುವುದಲ್ಲದೆ ಕಡಿಮೆ ಶಬ್ದದ ಅತ್ಯಂತ ಸೂಕ್ಷ್ಮವಾದ ರೆಕಾರ್ಡಿಂಗ್ ಸಾಧ್ಯ ಮತ್ತು ಬಹು ಉದ್ದೇಶದ ನಾಯ್ಸ್ ರಿಡಕ್ಷನ್ ಸಿಸ್ಟಂ ಕೂಡಾ ಶಬ್ದ ಕಡಿಮೆ ಮಾಡಲು ಮತ್ತು ಕಡಿಮೆ ಬೆಳಕಿನಲ್ಲಿ ಉತ್ತಮ ಚಿತ್ರಗಳನ್ನು ಪಡೆಯಲು ನೆರವಾಗುತ್ತವೆ ಎಂದು ಕಂಪೆನಿ ಹೇಳಿದೆ.


ಬೆಲೆ ₹ 34,990. ವಿವರಕ್ಕೆ: 9448902288




## ಮ್ಯಾಟ್ರಿಕ್ಸ್‌ನಿಂದ ಆಪ್ಟಿ ಸ್ಮೂತ್

ರೇಷ್ಮೆಯ ಕೇಶ ಪಡೆಯುವ ಸಲುವಾಗಿ ಲೋರಿಯಲ್ ಕಂಪೆನಿಯ ಸಹ ಸಂಸ್ಥೆಯಾದ ಮ್ಯಾಟ್ರಿಕ್ಸ್ ಇದೀಗ ಆಪ್ಟಿ ಸ್ಮೂತ್ ಎಂಬ ಹೊಸ ಉತ್ಪನ್ನವನ್ನು ಬಿಡುಗಡೆ ಮಾಡಿದೆ. ಇದು ಅಮೆರಿಕನ್ ಸಲೂನ್ ಬ್ರ್ಯಾಂಡ್ ಆಗಿದ್ದು, ಕೂದಲನ್ನು ನೈಸರ್ಗಿಕವಾಗಿ ಪೋಷಿಸುತ್ತದೆ ಎನ್ನುತ್ತದೆ ಕಂಪೆನಿ.

ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗೆ 98863 33942



## ಜಾನ್ಸನ್ ಇಂಟರ್‌ಲಾಕಿಂಗ್ ಟೈಲ್ಸ್

ಜಾನ್ಸನ್ ಟೈಲ್ಸ್ ಇದೀಗ ಇಂಟರ್‌ಲಾಕಿಂಗ್ ಟೈಲ್ಸ್ ಎಂಬ ಹೊಸ ಉತ್ಪನ್ನವನ್ನು ಮಾರುಕಟ್ಟೆಗೆ ತಂದಿದೆ. ನೈಸರ್ಗಿಕ ಶಿಲೆಯ ಸೌಂದರ್ಯ, ವಿನೂತನ ಶೈಲಿ ಮತ್ತು ಪ್ರಜ್ವಲ ವರ್ಣಗಳು ಈ ಹೊಸ ಟೈಲ್ಸ್‌ನ ವೈಶಿಷ್ಟ್ಯ.

ಈ ಟೈಲ್ಸ್ ಒಳಾಂಗಣ, ಅಡುಗೆ ಕೋಣೆ, ವರಾಂಡ, ಹೊರಾಂಗಣ ವಿನ್ಯಾಸ, ಉದ್ಯಾನವನದ ಮೆಟ್ಟಿಲು ಮುಂತಾದ ಕಡೆ ಸೂಕ್ತವಾಗಿದ್ದು ನೈಸರ್ಗಿಕ ಶಿಲೆಯ ಹೊಳಪು ನೀಡುತ್ತದೆ, ಸೌಂದರ್ಯ ವೃದ್ಧಿಸುತ್ತದೆ ಎನ್ನುತ್ತದೆ ಕಂಪೆನಿ. ಪ್ರತಿ ಚದರ ಅಡಿ ಟೈಲ್ಸ್ ಬೆಲೆ ₹ 105. ಎಲ್ಲ ಜಾನ್ಸನ್ ಟೈಲ್ಸ್ ಮಳಿಗೆಗಳಲ್ಲಿ ಸಿಗುತ್ತದೆ.

ವಿವರಕ್ಕೆ: 9594652255